# ಕರ್ನಾಟಕ ಸರ್ಕಾರ

ಸಂ : ಡಿಯುಡಿಸಿ/ಟೆಂಡರ್/ಸಿ.ಆರ್-76/2012-13

ಜಿಲ್ಲಾಧಿಕಾರಿಗಳ ಕಾರ್ಯಾಲಯ.
ಬೀದರ.
ದಿನಾಂಕ : 08.01.2013.

**-: ಅಲ್ಪಾವಧಿ ಟೆಂಡರ್ ಪ್ರಕಟಣೆ :-**

* * *

2012-13ನೇ ಸಾಲಿನ ನಗರಸಭೆ ಸಾಮಾನ್ಯ ನಿಧಿ ಅನುದಾನದಡಿಯಲ್ಲಿ ಬೀದರ ನಗರ ಸಭೆ ವ್ಯಾಪ್ತಿಯಲ್ಲಿಯ ಬರುವ ವಿವಿಧ ವಾರ್ಡಗಳಲ್ಲಿ ಅಳವಡಿಸಲಾದ ದಾರಿ ದೀಪಗಳ ಹೈಮಾಸ್ಟ, ಸೆಮಿಹೈಮಾಸ್ಟ, ಮಿನಿಹೈಮಾಸ್ಟ, ರಸ್ತೆಯ ಮಧ್ಯ ದ್ವಿವಿಭಜಕ ದಾರಿ ದೀಪ, ಬಡಾವಣೆಗಳಲ್ಲಿ ಅಳವಡಿಸಿದ ದಾರಿದೀಪಗಳು ಮತ್ತು ಉದ್ಯಾನವನಗಳಲ್ಲಿ, ಸಮುದಾಯ ಭವನಗಳಲ್ಲಿ, ಸಾರ್ವಜನಿಕ ಶೌಚಾಲಯ ಹಾಗೂ ನಗರಸಭೆ ವಿವಿಧ ಕಚೇರಿಗಳಲ್ಲಿ ಅಳವಡಿಸಲಾದ ದೀಪಗಳ ವಾರ್ಷಿಕ ನಿರ್ವಹಣೆ ಸಲುವಾಗಿ ಕರ್ನಾಟಕ ಲೋಕೋಪಯೋಗಿ ಸಂಹಿತೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಕ್ಟ 2000 ಮತ್ತು ಅದರ ಇತ್ತೀಚಿನ ತಿದ್ದುಪಡಿಗಳಂತೆ ಲೋಕೋಪಯೋಗಿ ಇಲಾಖೆಯಲ್ಲಿ / ಸಿ.ಪಿ.ಡಬ್ಲ್ಯೂ.ಡಿ.ಯಲ್ಲಿ ಹಾಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಿಂದ ಐಟಂವಾರು ದರ ಟೆಂಡರನ್ನು ದ್ವಿ-ಪ್ರತಿಯಲ್ಲಿ ಅಹ್ವಾನಿಸಲಾಗಿದೆ. ಟೆಂಡರಗಳನ್ನು ಕಚೇರಿ ಸಮಯದಲ್ಲಿ ನಿಗದಿ ಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಗುತ್ತಿಗೆದಾರರು ಖುದ್ದಾಗಿ ಇಲ್ಲವೆ ಅವರ ಪ್ರತಿನಿಧಿಗಳ ಮುಖಾಂತರ ಪಡೆದು ಸಲ್ಲಿಸಬಹುದು.

**- : ಟೆಂಡರ ನಡುವಳಿಗಳ ದಿನಾಂಕಗಳು ಮತ್ತು ವೇಳಾ ಪಟ್ಟಿ ಕೆಳಗಿನಂತಿದೆ : -**

1. ಖಾಲಿ ಟೆಂಡರ ಶೆಡ್ಯೂಲಗಳು ವಿತರಿಸುವ ಕೊನೆಯ ದಿನಾಂಕ ಸಾಯಂಕಾಲ 5:30 ಗಂಟೆವರೆಗೆ : 28.01.2013
2. ಭರ್ತಿ ಮಾಡಿದ ಮೋಹರಬಂದ ಟೆಂಡರ ಶೆಡ್ಯೂಲಗಳು ಸ್ವೀಕರಿಸುವ ಕೊನೆಯ ದಿನಾಂಕ ಸಾಯಂಕಾಲ : 4:00 ಗಂಟೆಗೆ : 29.01.2013
3. ಟೆಂಡರನ್ನು ತೆರೆಯುವ ದಿನಾಂಕ ಸಾಯಂಕಾಲ 5.00 ಗಂಟೆಗೆ : 29.01.2013

**ಕಾಮಗಾರಿಗಳ ವಿವರ ಮತ್ತು ಅರ್ಜಿದಾರರಿಗೆ ಬೇಕಾಗುವ ಅರ್ಹತೆಯ ವಿವರ ಕೆಳಗಿನಂತಿದೆ.**

| ಕ್ರ ಸಂ | ಕಾಮಗಾರಿಯ ಹೆಸರು | ಟೆಂಡರಿಗೆ ನಿಗಧಿಪಡಿ ಸಲಾದ ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ರೂ.ಗಳಲ್ಲಿ | ಟೆಂಡರ ಡಾಕುಮೆಂಟ್ಸ್ ಬೆಲೆ + ತೆರಿಗೆ ಸಹಿತ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | **Package:1** Annual Street Light Maintenance For Ward 01 to 20, FTL, SV & for Office Complexes | 22.58 | 45160/- | 4500/- | ಗುತ್ತಿಗೆದಾರರು / ಏಜೆನ್ಸಿಯು ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಿದ್ದಲ್ಲಿ ಮುಂದಿನ ಮೂರು ವರ್ಷಗಳವರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸಲಾಗುವುದು. |
| 2 | **Package:2** Annual Street Light Maintenance For Ward 21 to 35, FTL, SV & for Office Complexes | 17.82 | 44550/- | 3700/- | |
| 3 | **Package:3** Annual Street Light Maintenance For High Mast / Mini Masts fittings in ward No 01 to 35 | 17.84 | 44600/- | 3700/- | |
| 4 | **Package:4** Annual Street Light Maintenance For Medians Lights Tubular Pole fittings ward no 01 to 35 | 19.25 | 48125/- | 4000/- | |

**ಷರತ್ತುಗಳು :-**

1. ಕಾಮಗಾರಿಗಳಿಗೆ ಬೇಕಾಗಿರುವ ಇ.ಎಂ.ಡಿ. ಮೊತ್ತ ಹಾಗೂ ಟೆಂಡರ ಡಾಕ್ಯುಮೆಂಟಿನ ಬೆಲೆಯನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ತೆಗೆದು (Project Director DUDC BIDAR) ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಬೀದರ ರವರ ಹೆಸರಿನಲ್ಲಿ ಕಡ್ಡಾಯವಾಗಿ ಪಡೆದು ಖಾಲಿ ಟೆಂಡರ ಪುಸ್ತಕಗಳಿಗೆ ಅರ್ಜಿ ಸಲ್ಲಿಸುವಾಗ ಕೊಡತಕ್ಕದು.
2. ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಅಂಗಿಕರಿಸುವ / ತಿರಸ್ಕರಿಸುವ ಹಕ್ಕು ಕಾಯ್ದಿರಿಸಿದೆ.
3. ಖಾಲಿ ಟೆಂಡರ ಪುಸ್ತಕಗಳ ಬೆಲೆ ಯಾವುದೇ ಸ್ಥಿತಿಯಲ್ಲಿ ಹಿಂತಿರುಗಿಸಲಾಗುವಂತಿಲ್ಲ.
4. ಗುತ್ತಿಗೆದಾರರು ಕಾಮಗಾರಿಗಳನ್ನು ಪಾರದರ್ಶಕತೆ ನಿಯಮದಡಿ ಮಾಡತಕ್ಕದು.
5. ಅಂಚೆಯ ಮೂಲಕ ಟೆಂಡರ ಪುಸ್ತಕಗಳನ್ನು ನೀಡಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ.
6. ಷರತ್ತುಗಳು ಉಲ್ಲಂಘನೆ ಮಾಡಿದ್ದಲ್ಲಿ ಟೆಂಡರಗಳನ್ನು ತಿರಸ್ಕರಿಸಲಾಗುವುದು
7. ಖಾಲಿ ಟೆಂಡರ ಪುಸ್ತಕಗಳನ್ನು ಪಡೆಯಲು ಇಚ್ಛಿಸಿರುವ ಗುತ್ತಿಗೆದಾರರು/ಏಜೆನ್ಸಿದಾರರು ಅರ್ಜಿಯ ಜೊತೆಯಲ್ಲಿ ಖಾಲಿ ಟೆಂಡರ ಪುಸ್ತಕಗಳ (ಹಿಂತಿರುಗಿಸಲಾಗದ) ಬೆಲೆಯನ್ನು, ಗುತ್ತಿಗೆದಾರರು/ ಏಜೆನ್ಸಿದಾರರು ನೊಂದಣಿ ಪ್ರಮಾಣ ಪತ್ರದ ಪ್ರತಿಯನ್ನು ಮತ್ತು ಇತ್ತಿಚಿನ ಆದಾಯ ತೆರಿಗೆ ಪಾವತಿ ಹಾಗೂ ಮಾರಾಟ ತೆರಿಗೆ ಪಾವತಿ ದಸ್ತಾವೇಜುಗಳ ಹಾಗೂ ಹಿಂದಿನ ಎರಡು ವರ್ಷಗಳ ಅಡಿಟ ವರದಿ ಮತ್ತು Turn over ಲಗತ್ತಿಸುವುದು.

ಪುಟ 2ಕ್ಕೆ ...

ಸಂ : ಡಿಯುಡಿಸಿ/ಟೆಂಡರ್/ಸಿ.ಆರ್- /2012-13 ದಿನಾಂಕ : 05.01.2013.

8. ಪ್ರಮಾಣ ಪತ್ರಗಳನ್ನು ಲಗತ್ತಿಸದೇ ಇರುವ ಟೆಂಡರಗಳನ್ನು ತಿರಸ್ಕರಿಸಲಾಗುವುದು.
9. ಟೆಂಡರಿನ ತಾಂತ್ರಿಕ ಬಿಡ್ ಜೊತೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳು ನೋಟರಿ ಅಥವಾ ಗೆಜೆಟೆಡ ಅಧಿಕಾರಿಗಳಿಂದ ಮೇಲ ರುಜು ಮಾಡಿರಬೇಕು. ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕದಂದು ಅಥವಾ ನಿಗಧಿತ ದಿನಾಂಕದಂದು ಗುತ್ತಿಗೆದಾರರು ಈ ಕಚೇರಿಗೆ ಹಾಜರು ಪಡಿಸಬೇಕು. ಇಲ್ಲದಿದ್ದಲ್ಲಿ ಅಂತಹ ಟೆಂಡರ ತಿರಸ್ಕರಿಸಲಾಗುವುದು.
10. ಟೆಂಡರ ಶೇಡ್ಯೂಲನ್ನು ಒಂದು ಸೀಲ್ ಮಾಡಿದ ಕವರನಲ್ಲಿಟ್ಟು ಅದರ ಮೇಲೆ ಟೆಂಡರನ್ನು ಯಾವ ಕಾಮಗಾರಿಗೆ ಸಲ್ಲಿಸಿದೆ ಎಂದು ಮತ್ತು ಇದನ್ನು ಸಲ್ಲಿಸಿದ ಗುತ್ತಿಗೆದಾರರ ಪೂರ್ಣ ವಿಳಾಸ ಇವುಗಳನ್ನು ಕವರ ಮೇಲೆ ಬರೆಯತಕ್ಕದ್ದು.
11. ಸದರಿ ಗುತ್ತಿಗೆದಾರರು ಟೆಂಡರ ಸಮಯದಲ್ಲಿ ಟೆಂಡರ ಮೊತ್ತಕಿಂತ ಕಡಿಮೆ ದರ ತುಂಬಿದಲ್ಲಿ ಸದರಿ ವ್ಯತ್ಯಾಸ ಮೊತ್ತದ ಡಿ. ಡಿ. ರೂಪದಲ್ಲಿ ಶೇಡೂಲ್ಡ "ಬಿ" / ಆರ್‌ಎಫ್‌ಪಿ ಜೊತೆಯಲ್ಲಿ ಲಗತ್ತಿಸಿ ಹಾಕಬೇಕು. ಇಲ್ಲದಿದಲ್ಲಿ ಟೆಂಡರ ತಿರಸ್ಕರಿಸಲಾಗುವುದು.
12. ಟೆಂಡರ ಪಟ್ಟಿಗೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇರಿಸಲಾಗುವುದು ಕಾರಣ ಗುತ್ತಿಗೆದಾರರು ಮೇಲೆ ತಿಳಿಸಿದ ನಿಗಧಿತ ದಿನಾಂಕ ಮತ್ತು ಸಮಯಕ್ಕೆ ತಮ್ಮ ಟೆಂಡರಗಳನ್ನು ಹಾಕುವುದು.
13. ಗುತ್ತಿಗೆದಾರರು ಹಿಂದಿನ 2 ವರ್ಷ 2010-11 ಮತ್ತು 2011-12ನೇ ಸಾಲಿನ ಆರ್ಥಿಕ ವರ್ಷದಲ್ಲಿ ಟೆಂಡರಿಗಿಟ್ಟ ಕಾಮಗಾರಿ ಮೊತ್ತಕ್ಕೆ ಕಡಿಮೆ ಇಲ್ಲದಂತೆ ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರವನ್ನು ತಾಂತ್ರಿಕ ಬಿಡ್‌ನೊಂದಿಗೆ ಲಗತ್ತಿಸತಕ್ಕದು.
14. ಖಾಲಿ ಟೆಂಡರ ಡಾಕುಮೆಂಟ ಅರ್ಜಿಯನ್ನು ಸಲ್ಲಿಸುವಾಗ ಕಾಮಗಾರಿಯ ಕೆಲಸಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ಸ್ವಂತ ಹೊಂದಿರುವ ಬಗ್ಗೆ ಅಥವಾ ಬಾಡಿಗೆ / ಲೀಸ್ ಆಧಾರದ ಮೇಲೆ ಪಡೆದಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸತಕ್ಕದ್ದು.
15. ಗುತ್ತಿಗೆದಾರರು ಟೆಂಡರಿಗಿಟ್ಟ ಮೊತ್ತಕ್ಕೆ ಶೇಕಡ 60% ಪ್ರತಿಶತ ಮೌಲ್ಯಗಿಂತ ಕಡಿಮೆ ಇರದಂತೆ ಇದೇ ತರಹದ ಒಂದು ಕಾಮಗಾರಿಯ ಕೆಲಸವು ಪೂರ್ಣಗೊಳಿಸಿದವರಾಗಿರಬೇಕು. ಹಾಗೂ ಕೆಲಸ ನಿರ್ವಹಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ತಾಂತ್ರಿಕ ಬಿಡನೊಂದಿಗೆ ಲಗತ್ತಿಸತಕ್ಕದ್ದು.
16. ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸಾಮಗ್ರಿಗಳ ಗುಣ ನಿಯಂತ್ರಣ ಪರೀಕ್ಷೆಗಳನ್ನು ಪೂರೈಸಿದ ಸಾಮಗ್ರಿಗಳು ಮಾತ್ರ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಹಾಗೂ ಗುಣ ನಿಯಂತ್ರಣ ಪರೀಕ್ಷೆ ಫಲಿತಾಂಶದ ವರದಿ ಸಲ್ಲಿಸುವುದು.
17. ಹೆಚ್ಚಿನ ಮಾಹಿತಿಗಾಗಿ ಎಲ್ಲಾ ಗುತ್ತಿಗೆದಾರರು ಕಚೇರಿ ಸಮಯದಲ್ಲಿ ಟೆಂಡರ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶ ತಾಂತ್ರಿಕ ವಿಭಾಗದಿಂದ ಮಾಹಿತಿ ಪಡೆಯಬಹುದು.
18. ಮೇಲೆ ನಮೂದಿಸಿದ ಯಾವುದಾದರೂ ದಿನಾಂಕ ಸಾರ್ವಜನಿಕ ರಜೆ ಎಂದು ಘೋಷಿಸಿದರೆ ಅದರ ಮುಂದಿನ ದಿನ ವ್ಯವಹಾರ ದಿನವೆಂದು ಪರಿಗಣಿಸಲಾಗುವುದು.
19. ಜಿಲ್ಲಾಧಿಕಾರಿಗಳ ಕಾರ್ಯಾಲಯದ ವೆಬ್‌ಸೈಟ್ www.bidar.nic.in ನಲ್ಲಿ ಕೂಡ ಸದರಿ ಟೆಂಡಗ ಬಗ್ಗೆ ಮಾಹಿತಿಯನ್ನು ಪಡೆಯಬಹುದು.

ಜಿಲ್ಲಾಧಿಕಾರಿಗಳು
ಬೀದರ.

ಪ್ರತಿಯನ್ನು :-

1. ಜಿಲ್ಲಾ ಟೆಂಡರ ಬುಲೇಟ್‌ನ ಅಧಿಕಾರಿಗಳು ಬೀದರ ರವರಿಗೆ ಅಧಿಸೂಚನೆ ಪ್ರಕಟಿಸಲು ಸೂಚಿಸಿದೆ.
2. ಪೌರಾಯುಕ್ತರು ನಗರಸಭೆ ಬೀದರ ರವರ ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ.
3. ಕಚೇರಿಯ ಸೂಚನಾ ಫಲಕಕ್ಕೆ.